ಆ. ಹತ್ತೋಟಿ ಕ್ರಮಗಳ ಬಗ್ಗೆ ಕರಪತ್ರ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರ ನೀಡಲಾಗಿದೆ.

ಇ. ಮುನ್ನೆಚ್ಚರಿಕೆ ಕ್ರಮಗಳಾದ ಮಾಗಿ ಉಳುಮೆ ಬದುಗಳನ್ನು ಸುಡುವುದು ಮತ್ತು ರೈಟ್ ಟ್ರಾಪ್‌ಗಳ ಅಳವಡಿಕೆ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ. ರಾಜ್ಯವಲಯ ಸಸ್ಯ ಸಂರಕ್ಷಣಾ ಯೋಜನೆಯಲ್ಲಿ ಚಿತ್ರದುರ್ಗ ಜಿಲ್ಲೆಗೆ 1.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು ಈ ಅನುದಾನದಲ್ಲಿ ಹೊಸದುರ್ಗ ತಾಲ್ಲೂಕಿಗೆ 7.5 ಮೆ.ಟನ್ ಶೇ. 2ರ ಮೀಥೈಲ್ ಪಾರ್ಯಾಥಿಯಾನ್ ಪುಡಿಯನ್ನು ಹೊಸದುರ್ಗ, ಶ್ರೀರಾಂಪುರ, ಅಲಗಟ್ಟ, ಬಾಗೂರು, ಗಂಗ, ತಂಡಗಸಾಣಿಹಳ್ಳಿ ಗ್ರಾಮಗಳಲ್ಲಿ ರೈತರಿಗೆ ಶೇ.50ರ ರಿಯಾಯಿತಿಯ ದರದಲ್ಲಿ ವಿತರಿಸಲಾಗಿದೆ.

ಉ. ಕೆಂಪು ತಲೆ ಹುಳುಗಳನ್ನು ಕೈಯಿಂದ ಆರಿಸಿ ನಾಶಪಡಿಸುವ ಸಲುವಾಗಿ ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನಿಂದ ಉದ್ಯೋಗ ಭರವಸೆ ಯೋಜನೆಯಡಿ 2.00 ಲಕ್ಷ ರೂ. ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಊ. ರಾಜ್ಯ ವಲಯ ಸಸ್ಯ ಸಂರಕ್ಷಣಾ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯಲ್ಲಿ ಎಂಡೆಮಿಕ್ ಕೀಟಗಳ ಹತೋಟಗಾಗಿ ಸಸ್ಯ ಸಂರಕ್ಷಣಾ ರಾಸಾಯನಿಕಗಳನ್ನು ರೈತರಿಗೆ ಸರಬರಾಜು ಮಾಡಲು 2.00 ಲಕ್ಷ ರೂ.ಗಳನ್ನು ಕರ್ನಾಟಕ ಕೃಷಿ ನಿಗಮಕ್ಕೆ ನೀಡಲಾಗಿದೆ.

ವಿಷಯ: ಪರಿಶಿಷ್ಟರ ಸಲುವಾಗಿ ಖರ್ಚು ಮಾಡಿದ ಹಣದ ವಿವರ ಕುರಿತು.

2592 (3824)

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಇಲಾಖಾ ವತಿಯಿಂದ 1994-95, 95-96, 96-97ರ ಸಾಲಿನಲ್ಲಿ ಪರಿಶಿಷ್ಟರ ಸಲುವಾಗಿ ಖರ್ಚು ಮಾಡಲು ಸರ್ಕಾರವು ಮಂಜೂರು ಮಾಡಿದ ಹಣವೆಷ್ಟು ಮತ್ತು ವೆಚ್ಚ ಎಷ್ಟು ಮಾಡಲಾಯಿತು?

ಆ) ಯಾವ ಯಾವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಈ ಹಣ ವೆಚ್ಚ ಮಾಡಲಾಗಿದೆ ಮತ್ತು ಯಾವ ಸ್ಥಳಗಳಲ್ಲಿ ಈ ಕಾರ್ಯಕ್ರಮವಾಗಿದೆ ವಿವರ ನೀಡುವುದು?

ಇ) ವೆಚ್ಚ ಮಾಡಲು ಮಂಜೂರು ಮಾಡಿದ್ದ ಹಣ ವೆಚ್ಚವಾಗದೇ ಇದ್ದರೆ ಅದನ್ನು

ಯಾವ ಕಾರ್ಯಕ್ರಮಕ್ಕೆ ಬಳಸಲಾಯಿತು? ಹಾಗೂ ಎಷ್ಟು ಹಣ ಬಳಸಲಾಯಿತು?

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಅ) ಸಹಕಾರ ಇಲಾಖೆಯಿಂದ 1994-95, 95-96, 96-97ನೇ ಸಾಲಿಗೆ ಪರಿಶಿಷ್ಟರ ಸಲುವಾಗಿ ಮಂಜೂರು ಮಾಡಿದ ಹಣ ಮತ್ತು ವೆಚ್ಚದ ವಿವರಗಳು ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

		ಮಂಜೂರು ಮಾಡಿದ ಹಣ	ವೆಚ್ಚಮಾಡಿದ ಹಣ
1)	1994-95	249.74	281.20
2)	1995-96	569.40	649.78
3)	1996-97	441.74	232.25

ಆ) ಸಹಕಾರ ಇಲಾಖೆಯು ಪರಿಶಿಷ್ಟ ಜಾತಿ ಸದಸ್ಯರಿಗೆ ಆರ್ಥಿಕ ನೆರವನ್ನು ಒದಗಿಸುವ ಉದ್ದೇಶದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗಿದೆ.

1) ಪುನರ್ ಧನಸಹಾಯ ನೀಡಲು ಅನರ್ಹವಾಗಿರುವ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಪರಿಶಿಷ್ಟ ಜಾತಿ ಸದಸ್ಯರಿಗೆ ಸಾಲ ನೀಡುವುದು.

2) ಹೆಚ್ಚುವರಿ ಷೇರು ಬಂಡವಾಳವನ್ನಾಗಿ ಪರಿಶಿಷ್ಟ ಜಾತಿ ಸದಸ್ಯರಿಗೆ ಬಡ್ಡಿರಹಿತ ಸಾಲ ನೀಡುವುದು.

3) ಆಸ್ತಿ ನಿರ್ಮಾಣಕ್ಕಾಗಿ ನೀಡುವ ದೀರ್ಘಾವಧಿ ಸಾಲದ ಮೇಲೆ ಶೇಕಡ 60ರಷ್ಟು ಬಡ್ಡಿ ಸಹಾಯಧನ ಮಂಜೂರು ಮಾಡುವುದು.

4) ವಿಶೇಷ ಘಟಕ ಯೋಜನೆಯಡಿಯಲ್ಲಿ ಹೊಸ ಕಾರ್ಯಕ್ರಮಗಳಿಗೆ ಆರ್ಥಿಕ ನೆರವು ನೀಡುವುದು.

5) ಪರಿಶಿಷ್ಟ ಜಾತಿ ಪಂಗಡದವರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿಸಲು ಸಹಾಯಧನ ನೀಡುವುದು.

ಮೇಲೆ ತಿಳಿಸಿರುವ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲೂ ಅನುಷ್ಠಾನಗೊಳಿಸಲಾಗಿದೆ.

ಇ) 1994-95 ಮತ್ತು 1995-96ನೇ ಸಾಲಿನಲ್ಲಿ ಮಂಜೂರಾದ ಹಣಕ್ಕಿಂತ ಹೆಚ್ಚಾಗಿ ವೆಚ್ಚ ಮಾಡಲಾಗಿದೆ. ಆದರೆ 1996-97ನೇ ಸಾಲಿನಲ್ಲಿ ರೂ. 209.49 ಲಕ್ಷಗಳು ವೆಚ್ಚವಾಗದೇ ಇರುವುದಕ್ಕೆ ಕಾರಣವೇನೆಂದರೆ ಸಮಾಜ ಕಲ್ಯಾಣ ಇಲಾಖೆಯವರು ರೂ.200.00 ಲಕ್ಷಗಳನ್ನು ಗುಂಪುಗೂಡಿಸಿದ ಮೊತ್ತಕ್ಕೆ ಹಣವನ್ನು ತೆಗೆದುಕೊಂಡಿದ್ದರಿಂದ ಮತ್ತು ರೂ.9.49 ಲಕ್ಷಗಳನ್ನು ಹಣ ಜಿಲ್ಲಾ ಪಂಚಾಯತ್‌ಗಳಿಂದ ಕಡಿಮೆ ಮಂಜೂರಾದ ಪ್ರಯುಕ್ತ ಪೂರ್ಣವಾಗಿ ವೆಚ್ಚ ಮಾಡಲಾಗಿರುವುದಿಲ್ಲ.

ವಿಷಯ: ಮುಜರಾಯಿ ಇಲಾಖೆಯಿಂದ ಹಣ ಮಂಜೂರಾತಿ.

2595 (4022)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಜರಾಯಿ ಇಲಾಖೆಯಿಂದ ಯಾವ ಉದ್ದೇಶಗಳಿಗೆ ಹಣ ಮಂಜೂರು ಮಾಡಲಾಗುವುದು?

ಆ) ಈ ಹಣವನ್ನು ಮಂಜೂರು ಮಾಡಲು ಸರ್ಕಾರವು ರೂಪಿಸಿರುವ ನೀತಿ ನಿಯಮ ವಿಧಿ ವಿಧಾನಗಳೇನು?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) ಸರ್ಕಾರದಿಂದ ದೇವಾಲಯಗಳ ದುರಸ್ಥಿ ಜೀರ್ಣೋದ್ಧಾರ ನಿರ್ಮಾಣ:ಕಲ್ಯಾಣ ಮಂಟಪ ನಿರ್ಮಾಣ ಇವುಗಳಿಗಾಗಿ ಅನುದಾನವಾಗಿ ಮಂಜೂರು ಮಾಡಲಾಗುವುದು ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಲಂಬಾಣಿ ತಾಂಡ ಭಾಷಾ ಅಲ್ಪಸಂಖ್ಯಾತರು ವಾಸಿಸುವ ಪ್ರದೇಶಗಳಲ್ಲಿ ದೇವಾಲಯ ಪೂಜಾ ಮಂದಿರಗಳನ್ನು ದುರಸ್ಥಿ ಮತ್ತು ನಿರ್ಮಾಣಕ್ಕಾಗಿ ಆರಾಧನಾ ಯೋಜನೆಯಡಿ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

ಆ) ಸರ್ಕಾರದ ಸುತ್ತೋಲೆ ನಂ 171 ಎಂಎಲ್‌ಡಿ 90, ದಿನಾಂಕ 7-9-90ರಲ್ಲಿನ ಮಾರ್ಗಸೂಚಿಯಂತೆ ಧಾರ್ಮಿಕ ಸಂಸ್ಥೆಗಳಿಗೆ ಅನುದಾನವನ್ನು ಮಂಜೂರು ಮಾಡಲಾಗುವುದು ಹಾಗೂ ಆರಾಧನಾ ಯೋಜನೆಯಡಿಯಲ್ಲಿ ರೂಪಿಸಿದ ಮಾರ್ಗದರ್ಶಿ ಆದೇಶ ಸಂ.ಕಂಇ 104 ಮುಇವಿ 95, ದಿನಾಂಕ: 8-1-97ರಲ್ಲಿ ನಿರ್ದೇಶಿಸಿರುವಂತೆ ಆರಾಧನಾ ಯೋಜನೆಯಡಿ ಅನುದಾನವನ್ನು ಮಂಜೂರು